ಲೇಖನ 04

# ಪಕ್ಷಿವೀಕ್ಷಣೆ – ಹಸಿರು ಪಾಠಶಾಲೆ

ಹೆಸರೇ ಸೂಚಿಸುವಂತೆ ಪಕ್ಷಿಗಳನ್ನು ವೀಕ್ಷಿಸುವುದು ಎಂಬುದು ಸಾಮಾನ್ಯ ಅರ್ಥ, ಆದರೆ ಅದರ ಗೂಡಾರ್ಥ ಬಹಳ. ನೋಡುವುದು ಎಂದರೆ ಸುಮ್ಮನೇ ಕಣ್ಣಾಡಿಸುವುದು ಅಲ್ಲವೇ ಅಲ್ಲ, ಸೂಕ್ಷ್ಮವಾಗಿ ಗಮನಿಸುವುದು, ಪಕ್ಷಿಯ ಚಲನವಲನವನ್ನು ಗಮನಿಸುವುದು, ಅದರ ಬಗ್ಗೆ ತಿಳಿದುಕೊಳ್ಳುವುದು ಎಂದರ್ಥ..

ಸಾಮಾನ್ಯವಾಗಿ ನಮಗೆಲ್ಲ ಪಕ್ಷಿಗಳ ಕಲರವದ ಪರಿಚಯವಿದ್ದೇ ಇರುತ್ತದೆ, ಅದರಲ್ಲೂ ಹಳ್ಳಿಗಳ ಕಡೆ, ಕಾಡಿನ ಅಂಚಿನ ಮನೆ, ತೋಟದ ಮನೆಗಳಲ್ಲಿ ತೀರ ಸಾಮಾನ್ಯವಾಗಿ ಕಂಡುಬರುತ್ತದೆ, ಹಾಗೆಂದ ಮಾತ್ರಕ್ಕೆ ಸಿಟಿಗಳಲ್ಲಿ ಇಲ್ಲ ಎಂದಲ್ಲ. ಗಮನಿಸುವ ಮನಸ್ಸಿದ್ದರೆ ಸಾಕು ಎಲ್ಲ ಪ್ರದೇಶಗಳಲ್ಲೂ ಪಕ್ಷಿಗಳನ್ನು ಕಾಣಬಹುದು.

ಪಕ್ಷಿಪ್ರಿಯ ಮತ್ತು ಪಕ್ಷಿವಿಕ್ಷಕರ ನಡುವೆ ಬಹಳಷ್ಟು ವ್ಯತ್ಯಾಸವಿದೆ. ಸರಳವಾಗಿ ಹೇಳಬೇಕೆಂದರೆ ಪಕ್ಷಿವಿಕ್ಷಕ ಬರೀ ಪಕ್ಷಿಗಳನ್ನು ನೋಡಬಯಸುತ್ತಾನೆ, ಅದರ ಭಾವನೆಗಳಾಗಲಿ, ಅದರ ಸ್ವಾತಂತ್ರ್ಯವಾಗಲಿ ಅವನ ಪ್ರಾಥಮಿಕ ಉದ್ದೇಶವಾಗಿರುವುದಿಲ್ಲ, ಅದೇ ಪಕ್ಷಿಪ್ರೇಮಿಯ ಮೊದಲ ಉದ್ದೇಶವೇ ಅವುಗಳ ಸ್ವಾತಂತ್ರ್ಯ ಮತ್ತು ಬದುಕಿನ ಹಕ್ಕನ್ನು ಗೌರವಿಸುವುದು.

ನನ್ನ ದೃಷ್ಟಿಯಲ್ಲಿ ಹೇಳುವುದಾದರೆ ಪಂಜರದಲ್ಲಿ ಪಕ್ಷಿ ಸಾಕುವವ ಎಂದಿಗೂ ಪಕ್ಷಿಪ್ರೇಮಿಯಾಗಲಾರ, ಅದು ಎಂದಿಗೂ ಪಕ್ಷಿವಿಕ್ಷಕನಷ್ಟೇ.

ಉದಾ: ನಮಗೇ ಆಗಲಿ ಯಾರಾದರೂ ಕಟ್ಟಿಹಾಕಿ ಮೂರು ಹೊತ್ತೂ ಸಹ ಊಟ ಕೊಟ್ಟರೇ ಅದನ್ನ ಪ್ರೀತಿ ಎಂದು ಕರೆಯಲಾದಿತೆ? ಒಂದು ಕ್ಷಣ ಈ ಓದನ್ನು ನಿಲ್ಲಿಸಿ ಯೋಚಿಸಿ. ಅದೇ ನಿಜವಾದ ಪಕ್ಷಿಪ್ರೇಮಿ ಪಕ್ಷಿಗಳನ್ನು ಪ್ರಕೃತಿಯ ಮಡಿಲಲ್ಲಿ ನೋಡಬಯಸುತ್ತಾನೆ, ಅದರ ಬಗ್ಗೆ ತಿಳಿಯಬಯಸುತ್ತಾನೆ. ಪ್ರೀತಿ ಇರುವುದು ಸ್ವಾತಂತ್ರ್ಯದಲ್ಲೇ ತಾನೆ.



ಹಾಡೋ ಹಕ್ಕಿನ ತಂದು ಕೂಡಿಹಾಕೋದು,
ಕಟ್ಟೊ ಜೇನನ್ನ ಸುಟ್ಟು ತಿಂದು ಹಾಕೋದು..
ನರಮನುಷ್ಯ ಕಲಿಯಲ್ಲ, ಒಳ್ಳೆದು ಉಳಿಸಲ್ಲ,
ಅವ ನಡೆಯೋ ಹಾದಿಲಿ ಗರಿಕೆನೂ ಚಿಗುರಲ್ಲ.

ವ್ಹಾ ಎಂಥ ಸಾಲುಗಳು ಹಂಸಲೇಖರವರಿಂದ.

**ಪಕ್ಷಿವೀಕ್ಷಣೆಯ ಲಾಭಗಳೇನು..**

- ಮಾನಸಿಕ ನೆಮ್ಮದಿ
- ದೈಹಿಕ ಅರೋಗ್ಯ
- ಪರಿಸರ ತಿಳುವಳಿಕೆ
- ಉತ್ತಮ ಸಾಮಾಜಿಕ ಜವಾಬ್ದಾರಿ
- ಇತ್ಯಾದಿ.



ಎಲ್ಲವೂ ನೇರನೇರ ಇಲ್ಲದಿದ್ದರು ಒಂದಕ್ಕೊಂದು ಅಂಟಿಕೊಂಡ ಲಾಭದ ಚಟುವಟಿಕೆ ಇದು.

**೧. ಮಾನಸಿಕ ಆರೋಗ್ಯ**

ಒಂದು ಕ್ಷಣ ಕಣ್ಮುಚ್ಚು ಹಾಗೇ ನೆನಪಿಸಿಕೊಳ್ಳಿ ಹಕ್ಕಿಗಳ ಚಿಲಿಪಿಲಿ ಸದ್ದು ನಿಮ್ಮನ್ನು ಎಷ್ಟು ಮುದಗೊಳಿಸುತ್ತದೆ ಎಂದು, ಅದು ಕೇಳುತ್ತ ಕಳೆದುಹೋಗಬಹುದಲ್ಲವೇ, ಅದೂ ಕೂಡ ಸಂಗೀತದ ಥರ ಮಾನಸಿಕ ಸ್ಥಿತಿಯನ್ನು ಸುಂದರಗೊಳಿಸುತ್ತದೆ.

**೨. ದೈಹಿಕ ಆರೋಗ್ಯ..**

ಪಕ್ಷಿವೀಕ್ಷಣೆಗೆ ಉತ್ತಮವಾದ ಸಮಯ ಎಂದರೆ ಬೆಳಗಿನ ಜಾವ ಮತ್ತು ಸಂಜೆಯ ವೇಳೆ, ಬೆಳಗ್ಗೆ ಪಕ್ಷಿನೋಡಬೇಕೆಂದರೆ ಬೇಗ ಏಳುವುದು ಅವಶ್ಯ, ಬೇಗ ಏಳಬೇಕಾದರೆ ಬೇಗ ಮಲಗುವುದು ಅವಶ್ಯ, ಬೆಳಗ್ಗೆ ಬೇಗ ಏಳುವುದೆಂದ್ದರೆ ಉತ್ತಮ ಆರೋಗ್ಯದ ಅಭ್ಯಾಸ, ಮತ್ತೆ ಪಕ್ಷಿಗಳನ್ನ ಕೇವಲ ನಿಂತ ಜಾಗದಲ್ಲಿಯೇ ನೋಡಲಾಗುವುದಿಲ್ಲ ಅದರ ಜೊತೆ ನಡೆಯಬೇಕಾಗುತ್ತದೆ, ಅದರಿಂದ ಬೆಳಗಿನ ಜಾವದ ವಾಕ್ ಆಯಿತು.. ಪಕ್ಷಿಗಳನ್ನು ಗಮನಿಸಬೇಕೆಂದರೆ ಅವುಗಳ ಸದ್ದನ್ನು ಸೂಕ್ಷ್ಮವಾಗಿ ಕೇಳಿಸಿಕೊಳ್ಳಬೇಕು ಎಂದರೆ ಕಿವಿಗೆ ಕೆಲಸ ಕೊಡಬೇಕು, ಕಣ್ಣಿಗೆ ಕೆಲಸ ಕೊಡಬೇಕು, ಎಂದರೆ ಕಣ್ಣಿಗೆ, ಕಿವಿಗೆ ಎಷ್ಟು ಚಟುವಟಿಕೆ ಕೊಡುತ್ತೇವೆ ನೋಡಿ ತಿಳಿಯದೇ, ಸಂಗೀತವೇನು ಈಗ ಮೊಬೈಲ್ ನಲ್ಲಿ ಹೆಡ್ಫೋನ್ ಹಾಕಿಕೊಂಡೂ ಸಹ ಕೇಳಬಹುದು, ಆದರೆ ಅದರಿಂದ ಕಣ್ಣು ಮತ್ತು ಕಿವಿ ಹಾಳಾಗುತ್ತದೆ, ಆದರೆ ಪಕ್ಷಿವಿಕ್ಷಣೆಯಿಂದ ಇವುಗಳು ಮತ್ತಷ್ಟೂ ಚುರುಕಾಗುತ್ತದೆ. ನೋಡಿ ಎಷ್ಟೆಲ್ಲ ಲಾಭವಿದೆ ಅಲ್ಲವೆ.

**೩. ಪರಿಸರ ಜ್ಞಾನ**

ನಮ್ಮ ಸುತ್ತಲಿನ ಪ್ರಾಣಿ ಪಕ್ಷಿಗಳು ನಮಗೆ ನಮ್ಮ ಪರಿಸರದ ರಿಪೋರ್ಟ್ ಕಾರ್ಡ್ ಕೊಡುತ್ತವೆ. ಒಂದಂತೂ ಸತ್ಯ.. ಅವುಗಳು ವಾಸಿಸಲಾಗದ ಯಾವುದೇ ಪರಿಸ್ಥಿತಿಯಲ್ಲಿ ಮನುಷ್ಯ ಜೀವಿ ಜೀವಿಸಲಾರ.

ಪಕ್ಷಿಗಳ ಮಟ್ಟಿಗೆ ಹೇಳುವುದಾದರೆ ಪಕ್ಷಿಗಳು ಪರಿಸರ ಅಳತೆಮಾಪಕಗಳು, ಅವುಗಳ ಸಮೃದ್ಧ ಇರುವಿಕೆ ನಮ್ಮ ಪರಿಸರದ ಸ್ಥಿತಿಯ ಬಗ್ಗೆ ಹೇಳುತ್ತದೆ, ಪಕ್ಷಿಗಳು ಹೆಚ್ಚಾಗಿದ್ದರೆ ಸುತ್ತಲೂ ಕಾಡುಮರಗಳಿವೆ ಎಂದರ್ಥ, ಒಳ್ಳೆ ನೀರಿನ ಮೂಲಗಳಿವೆ ಎಂದರ್ಥ, ಪರಿಸರ ಸಮತೋಲನವಿದೆ ಎಂದರ್ಥ. ಒಂದುವೇಳೆ ಅವುಗಳ ನಾಶವಾದರೆ ಪ್ರಕೃತಿ ಹಾಳಾಗಿದೆ ಎಂದರ್ಥ, ಪ್ರಕೃತಿ ಹಾಳಾಗಿದೆ ಎಂದರೆ ನಮ್ಮ ವಿನಾಶ ಹತ್ತಿರ ಬಂದಿದೆ ಎಂದರ್ಥ ಈ ಸೂಕ್ಷ್ಮಗಳನ್ನು ಪಕ್ಷಿವೀಕ್ಷಣೆ ಕಲಿಸುತ್ತದೆ.

**೪. ಸಾಮಾಜಿಕ ಬದ್ಧತೆ**

ಮೊದಲೇ ಹೇಳಿದಂತೆ ಪಕ್ಷಿವೀಕ್ಷಣೆ ಸಹ ಒಂದು ಮನರಂಜನಾ ಚಟುವಟಿಕೆ. ಬೇರೆ ಬೇರೆ ಮನರಂಜನಾ ಕಾರ್ಯಕ್ರಮಗಳು ಯಾವುದು ಸಿನಿಮಾ, ಹೋಟೆಲ್ ಊಟ, ಇತ್ಯಾದಿಗಳ ಪರಿಣಾಮಗಳ ಬಗ್ಗೆ ಯೋಚಿಸಿ. ಒಂದು ಸಿನಿಮಾ ನೋಡಿ ಅದರಲ್ಲಿಯ ಅಶ್ಲೀಲ ನೃತ್ಯ, ಹಾಡು, ಪದಗಳ ಬಗ್ಗೆ ಚರ್ಚೆ ಮಾಡುತ್ತೇವೆ, ಜಂಕ್ ಫುಡ್ ಗಳ ಬಗ್ಗೆ ಚರ್ಚೆ ಮಾಡಿ ಮತ್ತೆಲ್ಲಿ ಬೇರೆ ಸಿಗುತ್ತದೆ ಎಂದು ಚರ್ಚಿಸಿ ಮತ್ತೇ ಬೇರೆ ಕಡೆ ತಿಂದು ಆರೋಗ್ಯ ಹಾಳು ಮಾಡಿಕೋಳ್ಳುತ್ತೇವೆ, ಅದೇ ರೀತಿ ಪಕ್ಷಿವೀಕ್ಷಣೆಯ ನಂತರ ಏನೆಲ್ಲಾ ಚರ್ಚೆಯಾಗಬಹುದು ಹೇಳಿ.. ಹಾ ಕೇವಲ ಪಕ್ಷಿಗಳ ಬಗ್ಗೆ, ಅವುಗಳ ಚಟುವಟಿಕೆ ಬಗ್ಗೆ, ಇನ್ನೂ ಹೆಚ್ಚಿನ ಪಕ್ಷಿಗಳು ಎಲ್ಲಿ ಸಿಗಬಹುದು ಎಂಬುದರ ಬಗ್ಗೆ ಅಲ್ಲವೇ.. ಅಂದರೆ ಮತ್ತೇ ಒಳ್ಳೆಯದ್ದೇ ಅಲ್ಲವೇ ಯೋಚಿಸುವುದು, ಇದು ಪರಿಸರ ಪ್ರೇಮ ಬೆಳೆಸುತ್ತದೆ.

ಬೇವು ಬಿತ್ತಿ ಮಾವು ಬಯಸಲಾದಿತೇ.. ಅದೇ ರೀತಿ ಮಕ್ಕಳಿಗೆ ನಾವು ಒಳ್ಳೆಯ ವಿಚಾರಗಳನ್ನು ಕೊಟ್ಟರೇ ತಾನೆ ಅವರೂ ಒಳ್ಳೆಯದು ಕಲಿಯುವುದು.. ಮಕ್ಕಳು ಊಟ ಮಾಡುತ್ತಿಲ್ಲ ಎಂದು ಯಾವುದೇ ವಯಸ್ಸಿಗೆ ಸಂಬಂಧಪಡದ ಅಶ್ಲೀಲ ಹಾಡುಗಳು ತೋರಿಸಿ ಊಟ ಮಾಡಿಸುವುದಕ್ಕೂ, ಪಕ್ಷಿಗಳ ತೋರಿಸಿ ಊಟ ಮಾಡಿಸುವುದಕ್ಕೂ ಎಷ್ಟೂ ವ್ಯತ್ಯಾಸವಿದೆ ಅಲ್ಲವೇ, ಊಟದ ನಂತರ ಮಕ್ಕಳ ಮನಸಿನಲ್ಲಿ ಖರಾಬು ಅಣ್ಣ ಖರಾಬು, ಓಡೋಗೇ ಸುಮ್ನೆ ಓಡೋಗೇ ಅಂತ ಉಳಿಯಬೇಕ, ಇಲ್ಲ ಚೆಂದದ ಪಕ್ಷಿಯ ಸುಮಧುರ ಸಂಗೀತ ಉಳಿಯಬೇಕಾ.. ನಿರ್ಧಾರ ಪೋಷಕರಾದ ನಿಮ್ಮದೇ ಅಲ್ಲವೇ..

ಇನ್ನೂ ಪಕ್ಷಿವೀಕ್ಷಣೆಯ ಲಾಭಗಳ ಬಗ್ಗೆ ವಿದ್ಯಾರ್ಥಿಗಳು ಹಾಗೂ ಕೆಲಸ, ಬ್ಯುಸಿನೆಸ್, ಹಿರಿಯರ ದೃಷ್ಟಿಯಲ್ಲಿ ನೋಡುವುದಾದರೆ...

**ಮಕ್ಕಳ ದೃಷ್ಟಿಯಲ್ಲಿ..**

ಮಕ್ಕಳಿಗೆ ಪ್ರಕೃತಿಯ ಬಗ್ಗೆ ಕಲಿಸುವುದೇ ಒಂದು ಅದ್ಭುತ ವಿಷಯ, ಪ್ರಕೃತಿ ಮಕ್ಕಳನ್ನು ವಿನಮ್ರವಾಗಿಸುತ್ತದೆ, ಬದುಕಿನ ಬಗ್ಗೆ ಉತ್ಸಾಹ ಮೂಡಿಸುತ್ತದೆ, ದಿನವಾದರೆ ಶಾಲೆ, ಹೊಮ್ ವರ್ಕ್, ಮೊಬೈಲ್ ಅಂತೆಲ್ಲ ಕಳೆದುಹೋಗುವ, ಇಲ್ಲವೇ ಅವರಿಗೂ ಕೂಡ ಆಯಾಸವಾಗುತ್ತದೆ, ಅವರಿಗೂ ಕೂಡ ಚೈತನ್ಯ ಬೇಕಾಗುತ್ತದೆ ಅದು ಪ್ರಕೃತಿ ಮಾತ್ರ ನೀಡಬಲ್ಲದು, ಪ್ರಕೃತಿಯ ಮಡಿಲಲ್ಲಿ ಅದು ಸಾಧ್ಯವಿದೆ. ಪಕ್ಷಿವೀಕ್ಷಣೆಗೆಂದು ಹೊರಟಾಗ ಬರೀ ಪಕ್ಷಿಗಳನ್ನು ಮಾತ್ರ ನೋಡುವುದಿಲ್ಲ ಅಲ್ಲವೇ, ಗುಡ್ಡ, ಕಾಡು, ಮರ, ನೀರು, ಕೆರೆ, ಆಕಾಶ, ಮಳೆ, ಬಿಸಿಲು ಈ ಎಲ್ಲದರ ಪರಿಚಯವಾಗುತ್ತದೆ, ನೆನಪಿನ ಶಕ್ತಿ ಹೆಚ್ಚಾಗುತ್ತದೆ, ಆರೋಗ್ಯ ಹೆಚ್ಚಾಗುತ್ತದೆ, ದೇಹ ಗಟ್ಟಿಯಾಗುತ್ತದೆ.

ಕೋಣೆ ಮಕ್ಕಳು ಕೊಳೆಯುತ್ತವೆ, ಬೀದಿ ಮಕ್ಕಳು ಬೆಳೆಯುತ್ತವೆ ಎಂಬ ನಾಣ್ಣುಡಿಯಂತೆ ಪ್ರಕೃತಿಯ ಮಡಿಲಲ್ಲಿ ಕಲಿಕೆ ಸಾಧ್ಯ.

**ಹಿರಿಯರ ದೃಷ್ಟಿಯಿಂದ...**

ದಿನವಾದರೆ ಸ್ತ್ರೀಯರು ಮನೆ ಕೆಲಸ, ಮಕ್ಕಳನ್ನು ಶಾಲೆಗೆ ಕಳಿಸಲು, ಗಂಡನನ್ನು ಆಫಿಸಿಗೆ ಕಳಿಸಲು ಸಾಕಷ್ಟು ಒತ್ತಡಗಳ ಅನುಭವಿಸಬೇಕಾಗುತ್ತದೆ, ಹಾಗೆಯೇ ಗಂಡು ಕೆಲಸದ ಒತ್ತಡ, ನಗರದ ನಾಟಕೀಯತೆ, ಸಂಬಂಧಿಕರ ಮೋಸಗಳು, ನೋವಿನ ಘಟನೆಗಳಿಂದ ಹೊರಬಂದು ನವ ಚೈತನ್ಯ ಪಡೆಯಲು ಪಕ್ಷಿವೀಕ್ಷಣೆ ಒಂದು ಉತ್ತಮವಾದ ಮಾರ್ಗವಾಗಿದೆ, ಅದೂ ಕೂಡ ಅತೀ ಕಡಿಮೆ ಖರ್ಚಿನಲಿ, ಹಲವು ಸಲ ಖರ್ಚೇ ಇಲ್ಲದೆ ಸಹ ಇದು ಸಾಧ್ಯವಿದೆ.

ಹತ್ತಿಯಂತೆ ನೂಲು ಎಂಬಂತೆ ಮಕ್ಕಳು ನಮ್ಮನ್ನು ನೋಡಿಯೇ ಕಲಿಯುವುದು, ಹಾಗಾಗಿ ನಾವುಗಳು ಉತ್ತಮ ಹವ್ಯಾಸಗಳ ರೂಡಿಸಿಕೊಳ್ಳುವುದು ಅವಶ್ಯ.



**ಕೊನೆಯದಾಗಿ..**

ಪಕ್ಷಿವೀಕ್ಷಣೆ ನಿಮ್ಮ ಮಕ್ಕಳಿಗೆ ಮಾಡಿಸಬೇಕಾದರೆ ಮೊದಲು ಪಕ್ಷಿಗಳು ಜೀವಿಸಬೇಕಾದ ಪರಿಸರ ನಿರ್ಮಿಸಬೇಕಾದ ಜವಾಬ್ದಾರಿ ನಮ್ಮದೇ ಅಲ್ಲವೇ.

**ಮಕ್ಕಳಲ್ಲಿ ಪಕ್ಷಿವೀಕ್ಷಣೆ ಬೆಳಸುವ ರೀತಿ ಹೇಗೆ ಎಂಬ ಪ್ರಶ್ನೆಯೇ...?**

ಮನೆ ಗೆದ್ದು ಊರು ಗೆಲ್ಲು ಎಂಬ ಮಾತಿನಂತೆ ಮೊದಲು ದೊಡ್ಡವರಾದ ನಾವುಗಳು ಅವುಗಳ ಬಗ್ಗೆ ಆಸಕ್ತಿ ಬೆಳೆಸಿಕೊಳ್ಳಬೇಕು, ನಂತರ ಮಕ್ಕಳಿಗೆ.. ವಾರದ ಕೊನೆಗೆ ಮಕ್ಕಳನ್ನು ಸಿನಿಮಾ, ಹೋಟೆಲ್ ಗಳಿಗೆ ಕರೆದೊಯ್ಯುವ ನಾವುಗಳು ಅದೇ ರೀತಿ ಪ್ರಕೃತಿಯ ಮಡಿಲಿಗೆ ಕರೆದೊಯ್ಯಬೇಕು, ನಂತರ ಮಕ್ಕಳು ತಾವಾಗಿಯೇ ಆಕರ್ಷಿತರಾಗುತ್ತಾರೆ, ಹಾಗಂತ ಇದು ಬಹಳ ಖರ್ಚು ಬಯಸುವ ಹವ್ಯಾಸವೇ...? ಖಂಡಿತ ಇಲ್ಲ, ನೀವು ಸಿನಿಮಾ, ಹೋಟೆಲ್ ಅಂತಾ ದಿನಕ್ಕೆ ಸಾವಿರಾರು ರೂಪಾಯಿ ಖರ್ಚು ಮಾಡುವ ಹಣದಲ್ಲಿ ಒಮ್ಮೆ ಒಂದೈದು ಸಾವಿರ ಬೈನಾಕೂಲರ್ ತೆಗೆದುಕೊಂಡರೆ ಬಹಳಷ್ಟು ವರ್ಷಗಳ ಕಾಲ ಈ ಸುಂದರ ಹವ್ಯಾಸಕ್ಕೆ ಸಲಕರಣೆ ಸಿಕ್ಕ ಹಾಗೆ.. ಚಿಂತಿಸುವ ಮನಸ್ಥಿತಿ ಮುಖ್ಯ.

ವಾರದ ಕೊನೆಯ ದಿನಗಳಲ್ಲಿ ಮಗ-ಮಗಳು ಪಾರ್ಟಿ, ಸ್ನೇಹಿತರು, ಪಿಕನಿಕ್ , ಎಂದು ಕುಡಿತ, ಮೋಜು, ಮಸ್ತಿಗೆ ತಯಾರಾಗುವ ಬದಲು ನಮ್ಮ ಮಕ್ಕಳು ಬೆಳಗ್ಗೆಯೇ ಬೇಗ ಎದ್ದು ಶಿಸ್ತಿನಿಂದ ಒಳ್ಳೆ ಬಟ್ಟೆಧರಿಸಿ ಒಂದು ಬೈನಾಕೂಲರ್ ಹಾಕಿಕೊಂಡು ಪ್ರಕೃತಿಯ ಸವಿಯಲು ಹೊರಡಲು ತಯಾರಾಗುವ ಮಕ್ಕಳಲ್ಲಿ ಯಾವುದು ನಿಮಗೆ ಆತ್ಮತೃಪ್ತಿ ನೀಡುತ್ತದೆ ಗಮನಿಸಿ..

ಮಕ್ಕಳು ನಾಳೆ ಏನಾಗಬೇಕು ಎಂಬುದು ಇಂದು ನಮ್ಮ ಕೈಯಲ್ಲಿದೆ, ಒಳ್ಳೆಯದು ಕಲಿಸಬೇಕು, ಒಳ್ಳೆಯದ್ದು ಇದೆ ಎಂಬುದನ್ನು ತೋರಿಸಬೇಕು. ಅಯ್ಯೋ ನೀವು ಹೇಳುವುದೆಲ್ಲ ಸರಿ ಆದರೆ ಜೊತೆಗಾರರು ಬೇಕಲ್ಲ, ಒಬ್ಬರನ್ನೇ ಹೇಗೆ ಕಳಿಸುವುದು ಎಂಬ ಪ್ರಶ್ನೆಗೆ ಉತ್ತರ.. ಅದೂ ಹೇಳುವೆ ಕೇಳಿ.. ಮೊದಲು ನಿರ್ಧರಿಸಿ ಸಾಕು ದಾರಿ ತಾನಾಗಿಯೇ ತೆರೆದುಕೊಳ್ಳುತ್ತದೆ. ಸುತ್ತವಿರುವ ಜನರ ಗಮನಿಸಿ ಪಕ್ಷಿವಿಕ್ಷಕರ ಗ್ರೂಪ್ ಸೇರಿಕೊಳ್ಳಿ, ಸಹಾಯ ಬೇಕಿದ್ದಲ್ಲಿ ನಾವೂ ಸಹ ಸದಾ ತಯಾರು ನಮ್ಮನ್ನು ಸಂಪರ್ಕಿಸಿ, ಯಾವುದೂ ಕೆಲಸ ಮಾಡಲಿಲ್ಲವೇ..? ಚಿಂತೆ ಯಾಕೆ ನೀವೇ ತಯಾರಾಗಿ , ನೀವೇ ಹೊರಡಿ ನಿಮ್ಮ ಜೊತೆಗೆ ಅವರಾಗಿಯೇ ಬಂದು ಸೇರುತ್ತಾರೆ, ಬದುಕಿನ ಮೇಲೆ ನಂಬಿಕೆ ಇರಲಿ, ಮನೆಯಿಂದ ಹೊರಡುವುದು ಮುಖ್ಯ ದಾರಿಯಲ್ಲಿ ಬಹಳಷ್ಟು ಜನ ಸಿಗುತ್ತಾರೆ, ನಿಮಗೆ ಯಾರು ಬೇಕು ಎಂಬುದನ್ನು ಆರಿಸಿಕೊಳ್ಳುವ ಬುದ್ದಿವಂತಿಕೆ ಇದ್ದರೆ ಸಾಕು.

ಅಂದಹಾಗೆ.. ಈ ವಾರದ ನಿಮ್ಮ ಪ್ಲಾನ್ ಏನು..? ಸಿನಿಮಾ, ಜಂಕ್ ಫುಡ್, ಕುಡಿತ, ಡ್ಯಾನ್ಸ್ ಅಥವಾ ಪಕ್ಷಿವೀಕ್ಷಣೆಯೇ.. ?

::::::::::::::::::::::::::::::::::::::::::::::::::::

**ರವೀಂದ್ರ ರೆಡ್ಡಿ**
**ಹವ್ಯಾಸಿ ಪಕ್ಷಿ ವೀಕ್ಷಕ**
**ತುಮಕೂರು**